# ಕರ್ನಾಟಕ ಸರ್ಕಾರ

ಸಂಖ್ಯೆ: ಲೋಇ 5 ಸ್ವೀಮರ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 3ನೇ ಮಹಡಿ
ಬೆಂಗಳೂರು, ದಿನಾಂಕ:16.11.2007

## ಸುತ್ತೋಲೆ

ವಿಷಯ: ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಈ ಹಿಂದೆ ಹೊರಡಿಸಿರುವ ಹಾಗೂ ಮುಂದೆ ಹೊರಡಿಸಲಾಗುವ ಪ್ರಮುಖವಾದ ಎಲ್ಲಾ ಸರ್ಕಾರಿ ಆದೇಶ/ಸುತ್ತೋಲೆ/ಅಧಿಕೃತ ಜ್ಞಾಪನ ಇತ್ಯಾದಿಗಳನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಅಳವಡಿಸುವ ಬಗ್ಗೆ.

-------

ದಿನಾಂಕ 31.10.2007 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಕಡತಗಳ ಮತ್ತು ಪತ್ರಗಳ ವಿಲೇವಾರಿ ಕುರಿತು ಮಾಸಿಕ ಪರಿಶೀಲನಾ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಯವರು ಸೂಚಿಸಿರುವಂತೆ ಈ ಇಲಾಖೆಯಿಂದ ಈ ಹಿಂದೆ ಹೊರಡಿಸಿರುವ ಎಲ್ಲಾ ಪ್ರಮುಖವಾದ ಸರ್ಕಾರಿ ಆದೇಶ / ಸುತ್ತೋಲೆ / ಅಧಿಕೃತ ಜ್ಞಾಪನ ಇತ್ಯಾದಿಗಳನ್ನು ಹಾಗೂ ಅವುಗಳಿಗೇನಾದರೂ ಮಾರ್ಪಾಡು ಆಗಿದ್ದರೆ ಅವುಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವ ಸಲುವಾಗಿ ಡಾ.ಶಾಂತರಾಜಣ್ಣ, ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಮುಖ್ಯ ಮಾಹಿತಿ ಅಧಿಕಾರಿ, ಮಾಹಿತಿ ತಂತ್ರಜ್ಞಾನ ಕೋಶ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಗೆ ಒಂದು ವಾರದ ಒಳಗಾಗಿ ಕಳುಹಿಸುವಂತೆ ಕೋರಲಾಗಿದೆ. ಅದೇ ರೀತಿ ಇನ್ನು ಮುಂದೆ ಹೊರಡಿಸಲಾಗುವ ಎಲ್ಲಾ ಸರ್ಕಾರಿ ಆದೇಶ / ಸುತ್ತೋಲೆ / ಅಧಿಕೃತ ಜ್ಞಾಪನ ಇತ್ಯಾದಿಗಳ ಪ್ರತಿಗಳನ್ನು ವೆಬ್‌ಸೈಟ್‌ಗೆ ಅಳವಡಿಸಲು ಮಾಹಿತಿ ತಂತ್ರಜ್ಞಾನ ಕೋಶಕ್ಕೆ ತಪ್ಪದೇ ಕಳುಹಿಸುವಂತೆ ಹಾಗೂ ಇಲಾಖೆಯ ಎಲ್ಲಾ ಶಾಖೆಗಳಿಂದ ಹೊರಡಿಸಲಾಗುವ ಎಲ್ಲಾ ಪತ್ರಗಳಲ್ಲಿ ಹಾಗೂ ಲಕೋಟೆಗಳ ಮೇಲೆ ಇಲಾಖೆಯ ವೆಬ್‌ಸೈಟ್ ಆದ **www.kpwd.gov.in** ಈ ವಿಳಾಸವನ್ನು ಕಡ್ಡಾಯವಾಗಿ ನಮೂದಿಸುವಂತೆ ಸೂಚಿಸಲಾಗಿದೆ.

(ಎ. ಚನ್ನೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಲೋಕೋಪಯೋಗಿ,ಬಂದರುಮತ್ತು
ಒಳನಾಡು ಜಲಸಾರಿಗೆ ಇಲಾಖೆ(ಸಮನ್ವಯ)

1. ಯೋಜನಾ ಸಮನ್ವಯಾಧಿಕಾರಿ, ಬಿಎಂಐಸಿಪಿ, ಲೋ, ಬಂ ಮತ್ತು ಒ ಜ ಸಾ ಇಲಾಖೆ
2. ಆಂತರಿಕ ಆರ್ಥಿಕ ಸಲಹೆಗಾರರು, ಲೋ, ಬಂ ಮತ್ತು ಒ ಜ ಸಾ ಇಲಾಖೆ
3. ವಿಶೇಷಾಧಿಕಾರಿ (ನಬಾರ್ಡ್)ಲೋ, ಬಂ ಮತ್ತು ಒ ಜ ಸಾ ಇಲಾಖೆ
4. ಮುಖ್ಯ ಮಾಹಿತಿ ಅಧಿಕಾರಿ, ಮಾಹಿತಿ ತಂತ್ರಜ್ಞಾನ ಕೋಶ, ಲೋ,ಬಂ ಮತ್ತು ಒ ಜ ಸಾ ಇಲಾಖೆ
5. ಸರ್ಕಾರದ ಅಧೀನ ಕಾರ್ಯದರ್ಶಿ, ಲೋ, ಬಂ ಮತ್ತು ಒ ಜ ಸಾ ಇಲಾಖೆ (ಸೇವೆಗಳು-ಎ) / (ಸೇವೆಗಳು-ಬಿ)/(ಸೇವೆಗಳು-ಸಿ)/(ಸಂಪರ್ಕ)/(ಕಟ್ಟಡಗಳು) /(ಬಂದರು) /(ಇಪಿಐ) (ಕಾನೂನುಕೋಶ)
6. ಶಾಖಾಧಿಕಾರಿ, ಲೋ, ಬಂ ಮತ್ತು ಒ ಜ ಸಾ ಇಲಾಖೆ (ಸೇವೆಗಳು-ಎ)/ (ಸೇವೆಗಳು-ಬಿ)/ (ಸೇವೆಗಳು -ಸಿ) /(ಸಂಪರ್ಕ-1)/ (ಸಂಪರ್ಕ-2)/(ಕಟ್ಟಡಗಳು)/ (ಬಂದರು)

ಪ್ರತಿಯನ್ನು ಮಾಹಿತಿಗಾಗಿ:

1. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋ, ಬಂ ಮತ್ತು ಒ ಜ ಸಾ ಇಲಾಖೆ
2. ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋ, ಬಂ ಮತ್ತು ಒ ಜ ಸಾ ಇಲಾಖೆ
3. ಜಂಟಿ ಕಾರ್ಯದರ್ಶಿ (ಸೇವೆಗಳು) / ಉಪ ಕಾರ್ಯದರ್ಶಿ (ಸಂಕ) ಲೋ, ಬಂ ಮತ್ತು ಒ ಜ ಸಾ ಇಲಾಖೆಯವರ ಆಪ್ತ ಸಹಾಯಕರು.